# ಋತುಮಾನ ವಸತಿಯುತ ಸೇತುಬಂಧ

## ಪರಿಕಲ್ಪನೆ :

ಗುಡಾರ ಶಾಲೆ ಮತ್ತು ಋತುಮಾನ ಸೇತುಬಂಧ ಕೋರ್ಸ್‌ಗಳನ್ನು ತೆರೆಯಲು ಮುಖ್ಯ ಕಾರಣ ವಲಸೆ. ಗುಡಾರ ಶಾಲೆಗಳನ್ನು ವಲಸೆ ಬಂದ ಪೋಷಕರೊಂದಿಗೆ ಬಂದ ಮಕ್ಕಳಿಗೆ ತೆರೆದರೆ ಋತುಮಾನ ಸೇತುಬಂಧ ಕೋರ್ಸ್‌ಗಳನ್ನು ವಲಸೆ ಹೋಗುವ ಪೋಷಕರೊಂದಿಗೆ ಮಕ್ಕಳು ಹೋಗುವುದನ್ನು ನಿಯಂತ್ರಿಸಲು ತೆರೆಯಲಾಗುತ್ತದೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆಯೂ ಆಗುವುದಿಲ್ಲ. ಜೊತೆಯ ಮಕ್ಕಳು ಕಲಿಕೆಯ ಮಟ್ಟವನ್ನು ಉತ್ತಮ ರೀತಿಯಲ್ಲಿ ಕಾಯ್ದುಕೊಳ್ಳಲು ಸಹಾಯಕವಾಗುತ್ತದೆ.

ಋತುಮಾನ ವಸತಿ ಶಾಲೆ ಎಂದು 05-06ನೇ ಸಾಲಿನಲ್ಲಿ ಈ ತೆರನಾದ ಕೇಂದ್ರಗಳಿಗೆ ಶೀರ್ಷಿಕೆ ನೀಡಲಾಗಿತ್ತು. 06-07ನೇ ಸಾಲಿನಲ್ಲಿ ಇವುಗಳನ್ನು ಋತುಮಾನ ಸೇತುಬಂಧ ಕೋರ್ಸ್ ಎಂದು ಕರೆಯಲಾಗಿದೆ. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಇ.ಜಿ.ಎಸ್. ಹೊರತುಪಡಿಸಿ ಉಳಿದ ಎಲ್ಲಾ ಬಗೆಯ ಕಾರ್ಯತಂತ್ರಗಳನ್ನು 06-07ನೇ ಸಾಲಿನಲ್ಲಿ ವಸತಿಯುತ ಬ್ರಿಡ್ಜ್‌ಕೋರ್ಸ್ ಅಥವ ವಸತಿ ರಹಿತ ಬ್ರಿಡ್ಜ್ ಕೋರ್ಸ್ ಅಡಿಯಲ್ಲಿ ಜಾರಿಗೊಳಿಸಿದ್ದಾರೆ. ಶೀರ್ಷಿಕೆಯಲ್ಲಿ ವ್ಯತ್ಯಾಸವಿದ್ದರೂ ಈ ಬಾರಿ ಕರೆಯಲಾಗುವ ಋತುಮಾನ ಸೇತುಬಂಧ ಕೋರ್ಸ್ ತನ್ನ ಪರಿಕಲ್ಪನೆಯಲ್ಲಿ ಹಿಂದಿನ ಬಾರಿ ನಡೆಸಿದ ಋತುಮಾನ ವಸತಿ ಶಾಲೆಯ ಪರಿಕಲ್ಪನೆಗೆ ಸಂಪೂರ್ಣವಾಗಿ ಸಂವಾದಿಯಾಗಿದೆ.

ಋತುಮಾನ ಸೇತುಬಂಧ ಕೋರ್ಸ್‌ಗಳನ್ನು ವಲಸೆ ಹೋಗುವ ಸ್ಥಳದಲ್ಲಿ ತೆರೆಯಲಾಗುತ್ತದೆ. ವಲಸೆಯ ಪ್ರಮಾಣ ಕಡಿಮೆ ಇದ್ದಾಗ ಅಂತಹ ಜನವಸತಿ ಕೇಂದ್ರಗಳಿಗೆ, ಕೇಂದ್ರದಲ್ಲಿರುವ ಮತ್ತು ಮಕ್ಕಳ ಸುರಕ್ಷತೆಗೆ ಮತ್ತು ಅವರು ಬಂದು ಹೋಗಲು ಅನುಕೂಲವಾಗುವ ಸ್ಥಳದಲ್ಲಿ ತೆರೆಯಲಾಗುತ್ತದೆ. ಈ ಕೇಂದ್ರಗಳನ್ನು ಶಾಲೆಯಲ್ಲಿಯೇ ತೆರೆಯಲು ಸಲಹೆ ನೀಡಲಾಗಿದೆ. ಶಾಲೆಗಳಲ್ಲಿ ಈಗಾಗಲೇ ಶೌಚಾಲಯ, ಕುಡಿಯುವ ನೀರು ಮುಂತಾದ ಸೌಲಭ್ಯಗಳು ಲಭ್ಯವಿದೆ. ಹಾಗಾಗಿ ಮಕ್ಕಳನ್ನು ಶಾಲೆಯಲ್ಲಿಯೇ ಉಳಿಸಿಕೊಂಡು ಅವರಿಗೆ ಸನಿವಾಸ ಕಲ್ಪಿಸಲು ಕಷ್ಟವಾಗಲಾರದು. ವಿದ್ಯಾರ್ಥಿಗಳಿಗೆ ಅಗತ್ಯವಾಗುವ ಸ್ನಾನದ ಕೋಣೆ, ಇತರ ಸೌಲಭ್ಯಗಳನ್ನು ಸ್ಥಳೀಯವಾಗಿ ಸಂಘಟಿಸಿಕೊಳ್ಳಬೇಕು. ತೀರಾ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸರ್ವ ಶಿಕ್ಷಣದ ಆಡಳಿತ ವೆಚ್ಚದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಅನುಮತಿ ಪಡೆದು ನಿರ್ಮಿಸಬಹುದು. ಆದರೆ ಇದು ಕಟ್ಟಕಡೆಯ ಪರ್ಯಾಯ ಕ್ರಮವಾಗಬೇಕು.

- ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಮಾತ್ರ ನೀಡಲಾಗುವುದು. ಅವರ ವ್ಯಾಸಂಗ ತಾವು ವಾಸಿಸುವ ಶಾಲೆಯಲ್ಲಿ ಅಥವಾ ಹತ್ತಿರದ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತದೆ.

## ಉದ್ದೇಶ :

- 6 ರಿಂದ 14 ವಯೋಮಾನದ ಮಕ್ಕಳ ಪೋಷಕರು ವಲಸೆ ಹೋಗುವುದರಿಂದ ಆ ಮಕ್ಕಳು ಶಾಲೆ ತೊರೆಯದಿರಲು ಈ ಕಾರ್ಯತಂತ್ರವನ್ನು ಅಳವಡಿಸಿದೆ.
  ಸಾರ್ವತ್ರಿಕ ಧಾರಣವನ್ನು (Universal Retention) ಕಾಯ್ದುಕೊಳ್ಳುವುದು.
  ವ್ಯಾಸಾಂಗ ಅವಧಿಯಲ್ಲಿ ನಿರಂತರವಾಗಿ ಹಾಜರಾಗುವ ಅವಕಾಶ ಕಲ್ಪಿಸಿ ಮಗುವಿನ ಕಲಿಕೆಯ ಮಟ್ಟವನ್ನು ಕಾಯ್ದುಕೊಳ್ಳುವುದು.

## ವ್ಯಾಪ್ತಿ :

- 6-14 ವಯೋಮಾನದ ಇಂತಹ ಮಕ್ಕಳು 25 ಇದ್ದಾಗ ಒಂದು ವಸತಿಯುತ ಸೇತುಬಂಧ ಕೋರ್ಸ್ ತೆರಯಬಹುದು ಮಕ್ಕಳ ಈ ಮಿತಿಯು ಕೇಂದ್ರದ ಖರ್ಚು - ವೆಚ್ಚಗಳನ್ನು ಸರಿದೂಗಿಸಲು ನಿಗದಿಪಡಿಸಿದೆಯೇ ವಿನಃ ಕಡಿಮೆ ಮಕ್ಕಳಿದ್ದಾಗ ತೆರೆಯಬಾರದು ಎಂಬ ನಿಬಂಧನೆ ಇಲ್ಲ. ಆದರೆ ಘಟಕ ವೆಚ್ಚವು ಪ್ರತಿ ಮಗುವಿಗೆ 5000/- ರೂಪಾಯಿಗಳನ್ನು ಮೀರಬಾರದು.
- ಈ ಕೇಂದ್ರಗಳು 06 ತಿಂಗಳು ನಡೆಯುತ್ತವೆ. ಆದರೆ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಕೇಂದ್ರಗಳ ಅವಧಿಯು ಬದಲಾವಣೆಯಾಗಬಹುದು. 06-07-ನೇ ಇಸವಿಯ ಮತ್ತು ಆ ಮೊದಲ 04 ತಿಂಗಳ ಅವಧಿಗೆ ಯೋಜಿಸಲಾಗಿತ್ತು.

ಕರ್ನಾಟಕದ ವಲಸೆಯ ಕ್ರಮವು ಹೆಚ್ಚಾಗಿ ಕೃಷಿ ಆಧಾರಿತವಾಗಿರುವುದರಿಂದ ನವೆಂಬರ್ ತಿಂಗಳಿನಿಂದ ವಲಸೆ ಸಾಮಾನ್ಯವಾಗಿ ಪ್ರಾರಂಭವಾಗುತ್ತದೆ. ಕೃಷಿಯೇತರ ಚಟುವಟಿಕೆ ಆಧರಿಸಿ ನಡೆಯುವ ವಲಸೆ ಯಾವ ಅವಧಿಗೂ ಅದು ಸೀಮಿತವಾಗಿರುವುದಿಲ್ಲ. ಅಂದರೆ ವಲಸೆ ಸರ್ವಕಾಲಿಕ, ವಲಸೆ ಹೋಗುವ ಅವಧಿಯನ್ನು ಆಧರಿಸಿ ಕೇಂದ್ರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು.

**ಈ ಕಾರ್ಯತಂತ್ರ ಯಾರಿಗೆ / ಎಲ್ಲಿ ಮಾಡಬೇಕು :**

- ವಲಸೆ ಹೋಗಲಿರುವ ಪೋಷಕರ 6-14 ವಯೋಮಾನದ ಮಕ್ಕಳು ಈ ಸೌಲಭ್ಯ ಹೊಂದಲು ಅರ್ಹರು.
- ಈ ಕಾರ್ಯತಂತ್ರ ವಲಸೆ ಹೋದ ಮಕ್ಕಳಿಗೆ ಅಲ್ಲ – ಬದಲಾಗಿ ಪೋಷಕರ ಜೊತೆ ಮಕ್ಕಳು ವಲಸೆ ಹೋಗದಿರಲು ಈ ಕಾರ್ಯತಂತ್ರ
- ವಲಸೆ ಹೋಗಲಿರುವ ಜನವಸತಿಯ ಶಾಲೆಗಳೇ ಈ ಮಕ್ಕಳ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತವೆ. ಇಂತಹ ಮಕ್ಕಳ ಸಂಖ್ಯೆ ತುಂಬಾ ಕಡಿಮೆ ಇದ್ದು ಕೇಂದ್ರ ನಡೆಸಲು ಖರ್ಚು – ವೆಚ್ಚಗಳು ಪ್ರತಿ ಮಗುವಿಗೆ ನೀಡಲಿರುವ ಘಟಕ ವೆಚ್ಚಕ್ಕಿಂತ ದುಬಾರಿಯಾಗಿ ಪರಿಣಮಿಸುವುದಾದರೆ ವಲಸೆ ಹೋಗುವ ಜನವಸತಿಗಳ ಕೇಂದ್ರ ಸ್ಥಾನದ ಜನವಸತಿಯ ಶಾಲೆಯನ್ನು ಋತುಮಾನ ಸೇತುಬಂಧ ಕೋರ್ಸ್ ಕೇಂದ್ರಕ್ಕೆ ಆಯ್ಕೆ ಮಾಡಿಕೊಳ್ಳಬಹುದು. ಆದರೂ ಯಾವುದೇ ಸಂದರ್ಭದಲ್ಲಿ ಖರ್ಚು ವೆಚ್ಚಗಳು ಪ್ರತಿ ಮಗುವಿನ ಘಟಕ ವೆಚ್ಚವನ್ನು ಮೀರಬಾರದು.

**ಯಾರು ನಡೆಸಬಹುದು :**

- ಸರ್ವ ಶಿಕ್ಷಣ ಅಭಿಯಾನದ ಮಧ್ಯವರ್ತನೆಗಳು ಸರ್ಕಾರ ಸಮುದಾಯದ ಮತ್ತು ಸರ್ಕಾರೇತರ ಸಂಘಟನೆಗಳ ಭಾಗವಹಿಸುವ ಮೂಲಕ ನಡೆಯಬೇಕೆಂಬುದು ಮೂಲ ಆಶಯ. ಶಿಕ್ಷಣ ಇಲಾಖೆ ಮತ್ತು ಸರ್ಕಾರೇತರ ಸಂಘಟನೆಗಳು ಈ ಕಾರ್ಯಕ್ರಮವನ್ನು ನಡೆಸಬಹುದು.
- ಸರ್ಕಾರಿ ಇಲಾಖೆಗಳು : ಉದಾಹರಣೆಗೆ ಶಿಕ್ಷಣ, ಕಾರ್ಮಿಕ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಈ ಕೇಂದ್ರಗಳನ್ನು ನಡೆಸಬಹುದು.
- ಈ ಕಾರ್ಯತಂತ್ರದ ಅನುಷ್ಠಾನ ಶಾಲೆಯ ಮುಖ್ಯಸ್ಥ ಮತ್ತು ಸಂಬಂಧಿಸಿದ ಎಸ್.ಡಿ.ಎಂ.ಸಿ. ಮೂಲಕ ನಡೆಯುತ್ತದೆ. ಈ ಕೇಂದ್ರದ ಸಂಪೂರ್ಣ ಹೊಣೆಗಾರಿಕೆಯು ಕೇಂದ್ರ ನಡೆಯುವ ಮುಖ್ಯ ಶಿಕ್ಷಕರ ಮೇಲಿದೆ. ಶಾಲಾ ಮುಖ್ಯಸ್ಥರು, ಸ್ವಯಂ ಸೇವಕರು ಮತ್ತು ಸಹಾಯಕರ ಕೆಲಸ ಕಾರ್ಯಗಳನ್ನು ಉಸ್ತುವಾರಿ ಮಾಡಬೇಕು ಹಾಗೂ ಕೇಂದ್ರ ಯಶಸ್ವಿಯಾಗಿ ಜರುಗಲು ಎಲ್ಲಾ ವಿಧದ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು.
- ಕೇಂದ್ರಗಳನ್ನು ಯಾರೇ ನಡೆಸಲಿ, ಶಿಕ್ಷಣ ಇಲಾಖೆಯು ಸಂಭಾವ್ಯ ವಲಸೆ ಸ್ಥಳಗಳನ್ನು ಗುರುತಿಸಿ ಅಂತಹ ಕುಟುಂಬದ ಶಾಲಾ ವಯಸ್ಸಿನ ಮಕ್ಕಳಿಗೆ ವಸತಿಯುತ ಬ್ರಿಡ್ಜ್ ಕೋರ್ಸ್ ಕೇಂದ್ರಗಳನ್ನು ತೆರೆಯಲಾಗುತ್ತದೆ ಎಂಬ ಕುರಿತು ವ್ಯಾಪಕ ಪ್ರಚಾರವನ್ನು ವಲಸೆ ಪ್ರಾರಂಭವಾಗುವ ಮುನ್ನ ನೀಡಬೇಕು. ಇದಕ್ಕಾಗಿ ಜಾಥಾ – ಪ್ರಕಟಣೆಗಳನ್ನು ಬ್ಲಾಕ್ ಶಿಕ್ಷಣಾಧಿಕಾರಿಯವರ ಕಾರ್ಯಾಲಯ ಕೈಗೊಳ್ಳಬೇಕು. ತರುವಾಯ ವಲಸೆ ಪ್ರಾರಂಭವಾಗುವ ಕನಿಷ್ಠ 15 ದಿನ ಮೊದಲು ಕೇಂದ್ರಗಳನ್ನು ಪ್ರಾರಂಭಿಸಬೇಕು.
- ಶಾಲಾ ಮುಖ್ಯಸ್ಥರು / ಎನ್.ಜಿ.ಓ. ಸಂಸ್ಥೆಗಳು ಮಕ್ಕಳ ಆರೋಗ್ಯದ ಕಡೆ ವಿಶೇಷ ಗಮನಹರಿಸಬೇಕು. ನಿಯಮಿತವಾಗಿ ಆರೋಗ್ಯ ತಪಾಸಣೆಯನ್ನು ಹತ್ತಿರದ ಸರಕಾರಿ ವೈದ್ಯರು / ಎ.ಎನ್.ಎಂ. ರಿಂದ ಮಾಡಿಸಬೇಕು.

**ಹಣಕಾಸು ಮತ್ತು ಖರ್ಚಿನ ವಿವರ :**

- ವಸತಿಯುತ ಬ್ರಿಡ್ಜ್ ಕೋರ್ಸ್‌ನ ಅವಧಿ 06 ತಿಂಗಳು. ಅನಿವಾರ್ಯ ಸಂದರ್ಭಗಳಲ್ಲಿ ಈ ಅವಧಿ ಹಿಗ್ಗುವ ಮತ್ತು ಕುಗ್ಗುವ ಸಂದರ್ಭಗಳಿವೆ. ಅಂತಹ ಪ್ರಕರಣಗಳಲ್ಲಿ ಘಟಕ ವೆಚ್ಚದ ಪ್ರಮಾಣವು ಕೇಂದ್ರ ನಡೆದ ಅವಧಿಗೆ ಸಂವಾದಿಯಾಗಿರುವುದು.
- 06 ತಿಂಗಳಿಗೆ ಪ್ರತಿ ಮಗುವಿಗೆ ಘಟಕ ವೆಚ್ಚ 5000/- ರೂಪಾಯಿಗಳು
- ಪಿ.ಎ.ಬಿಯಲ್ಲಿ ನಿಗಧಿಗೊಳಿಸಿರುವ ಸಂಖ್ಯೆಗೆ ಅನುಗುಣವಾಗಿ ಕೇಂದ್ರಗಳ ಸಂಖ್ಯೆ ಮಕ್ಕಳ ಸಂಖ್ಯೆಯು ಇರುತ್ತದೆ. ಹೀಗೆ ಆಶಿಸುವುದು ಆದರ್ಶ ಸ್ಥಿತಿ (Ideal State).

- ಹೆಚ್ಚಿನ ಬೇಡಿಕೆ ಒಂದು ಸಂದರ್ಭದಲ್ಲಿ ಒ.ಒ.ಎಸ್.ಸಿ. ಮಧ್ಯವರ್ತನೆಯಲ್ಲಿ ಪೂರ್ಣಗೊಳಿಸದಿರುವ ಹಣ ಉಳಿಕೆಯಾಗುತ್ತಿರುವ ಅಂಶವನ್ನು ಧೃಢೀಕರಿಸಿಕೊಂಡು ಕೇಂದ್ರ ಕಛೇರಿ ಅನುಮತಿ ನೀಡುತ್ತದೆ.

**ವಿವಿಧ ಬಾಬ್ತುಗಳಿಗೆ ಹಣ ಹಂಚಿಕೆ :**

| ವಿವರ | 05-06ನೇ ಸಾಲಿನಲ್ಲಿ | 06-07ನೇ ಸಾಲಿಗೆ 4 ತಿಂಗಳಿಗೆ | 09-10ನೇ ಸಾಲಿಗೆ ಪ್ರತಿ 6 ತಿಂಗಳಿಗೆ |
|---|---|---|---|
| ಮಕ್ಕಳ ಸಂಖ್ಯೆ | 26 | 25 | – |
| ಪ್ರತಿ ಮಗುವಿನ ಘಟಕ ವೆಚ್ಚ | 2450 | 2266 | 5,000 |
| ಸರಾಸರಿ ಅವಧಿ | 04 ತಿಂಗಳು | 04 ತಿಂಗಳು | 6 ತಿಂಗಳು |
| ಸ್ವಯಂ ಸೇವಕರ ಗೌರವಧನ (ವಸತಿ ನಿಲಯ ಪಾಲಕ / ಅಡಿಗೆಯವ) | 4000 | 4000 | 585 |
| ಸಹಾಯಕ / ಕಾವಲುಗಾರ ಗೌರವ ಧನ | – | 3200 | 395 |
| ಬೆಡ್ಡಿಂಗ್ | | | 120 |
| ಊಟದ ಖರ್ಚು | | 42,950 | 3270 |
| ಸಾದಿಲ್ವಾರು | | 1000 | 15 |
| ಕಲಿಕೆ ಬೋಧನೋಪಕರಣ | – | – | – |
| ಮಕ್ಕಳ ದೈನಂದಿನ ವಸ್ತುಗಳು | – | 4250 | 200 |
| ಮಕ್ಕಳ ಕಲಿಕಾ ಸಾಮಗ್ರಿ | – | 1250 | 100 |
| ವೈದ್ಯಕೀಯ | – | – | 50 |
| ತುರ್ತು ನಿಧಿ | – | – | 15 |
| ಸೂಟ್‌ಕೇಸ್ | – | – | 250 |
| | **63700-00** | **56,650-00** | **5,000** |

**ಟಿಪ್ಪಣಿ :**

- ಮಕ್ಕಳ ಸಂಖ್ಯೆ ಕಡಿಮೆ ಇದ್ದಲ್ಲಿ ಆಯಾ ಬಾಬ್ತುಗಳಿಗೆ ಖರ್ಚು ಮಾಡುವ ಹಣ ಪ್ರತಿ ಮಗುವಿನ ಲೆಕ್ಕದಲ್ಲಿ ಖರ್ಚು ಮಾಡಬೇಕು.
- ಸ್ವಯಂ ಸೇವಕರ ಮತ್ತು ಸಹಾಯಕರ ತಿಂಗಳ ಗೌರವಧನ ಕ್ರಮವಾಗಿ 3000 ಮತ್ತು 2000 ರೂ. ಮೀರಬಾರದು.
- ಸಹಾಯಕ / ಸ್ವಯಂ ಸೇವಕರ ಗೌರವಧನವನ್ನು ತಿಂಗಳು ತುಂಬಿದ ನಂತರ ಸಂಬಂಧಿಸಿದ ಸರ್ಕಾರೇತರ ಸಂಘಟನೆಗೆ ಪಾವತಿಸಬೇಕು.
- ಮಧ್ಯಾಹ್ನದ ಊಟವನ್ನು ಸಂಬಂಧಿಸಿದ ಶಾಲೆಯಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಪಡೆಯುತ್ತಾರೆ. ವಸತಿಯುತ ಬ್ರಿಡ್ಜ್ ಕೋರ್ಸ್ ಕೇಂದ್ರಗಳಲ್ಲಿ ಬೆಳಗಿನ ಉಪಹಾರ ಮತ್ತು ರಾತ್ರಿಯ ಊಟವನ್ನು ಪಡೆಯುತ್ತಾರೆ.
- ಮಕ್ಕಳ ದೈನಂದಿನ ವಸ್ತುಗಳಿಗಾಗಿ ಇರುವ ಹಣದಲ್ಲಿ ಮಕ್ಕಳಿಗೆ ಬೇಕಾದ ಸ್ನಾನದ ಸಾಬೂನು, ಬಟ್ಟೆ ಒಗೆಯುವ ಸಾಬೂನು, ಎಣ್ಣೆ, ಹಲ್ಲುಜ್ಜುವ ಬ್ರಶ್, ಟೂತ್‌ಪೇಸ್ಟ್, ಬಾಚಣಿಗೆ, ಹೇರ್‌ಪಿನ್, ಟೇಪು, ಬಕೆಟ್, ಮಗ್, ಚಾಪೆ, ಸೊಳ್ಳೆಪರದೆ ಇತ್ಯಾದಿ ಅಗತ್ಯ ವಸ್ತುಗಳನ್ನು ಖರೀದಿಸಲು ಹಾಗೂ ಕೇಂದ್ರಕ್ಕೆ ಬೇಕಾದ ಸಾದಿಲ್ವರು ಸಾಮಗ್ರಿ ಕೊಳ್ಳಲು ಬಳಸಬಹುದು.

ಈ ವಸ್ತುಗಳನ್ನು ಕೊಂಡಿರುವುದಕ್ಕೆ ಅಗತ್ಯ ರಸೀತಿಗಳು ಮತ್ತು ಸಂಗ್ರಹಕ್ಕೆ ಈ ವಸ್ತುಗಳನ್ನು ದಾಖಲಿಸಿ ವಿತರಣೆ ಮಾಡಿರುವುದಕ್ಕೆ ದಾಖಲೆ ನಿರ್ವಹಿಸಬೇಕು.

- ಕೇಂದ್ರದಲ್ಲಿ ಕಡ್ಡಾಯವಾಗಿ ಕನ್ನಡಿ, ಬಾಚಣಿಗೆ, ಕಸದ ಬುಟ್ಟಿಗಳನ್ನು ಇಟ್ಟಿರಬೇಕು.
- ಊಟದ ಖರ್ಚಿಗಾಗಿ ನೀಡಿರುವ ಹಣದಲ್ಲಿ ಇಂಧನದ ಖರ್ಚು ಸೇರಿದೆ. ಅಡಿಗೆ ತಯಾರಿಸಲು ಬೇಕಾದ ಪಾತ್ರೆ ಅಕ್ಷರ ದಾಸೋಹ ಯೋಜನೆಯ ಪಾತ್ರೆಗಳನ್ನು ಬಳಸಬಹುದು (ಗ್ಯಾಸ್ ಸ್ಟೌವ್, ಪಾತ್ರೆ ಪಗಡ ಮಾತ್ರ, ರೇಷನ್ / ಇಂಧನ ಅಲ್ಲ)

ಮಕ್ಕಳು ಸತ್ವಯುತ ಆಹಾರ ಪಡೆಯಲು ಅನುಕೂಲವಾಗುವಂತೆ ವಿವಿಧಬಗೆಯ ತಿಂಡಿ (ಬೆಳಗಿನ ಉಪಹಾರ) ಮತ್ತು ರಾತ್ರಿಯ ಊಟವನ್ನು ನೀಡಬೇಕು. ಸೊಪ್ಪು, ತರಕಾರಿಗಳನ್ನು ಯುಕ್ತವಾಗಿ ಬಳಸಬೇಕು. ರಾಗಿ ಮತ್ತು ಜೋಳ ಬಳಸುವ ಪ್ರದೇಶಗಳಲ್ಲಿ ಈ ಧಾನ್ಯಗಳನ್ನು ಆಹಾರ ತಯಾರಿಸಲು ಬಳಸಬಹುದು.

ಮಧ್ಯಾಹ್ನದ ಊಟವು ಶಾಲೆಯಲ್ಲಿ ಆಗುವುದರಿಂದ ಸ್ವಲ್ಪ ಹಣ ಉಳಿತಾಯವಾಗುತ್ತದೆ. ಈ ಹಣದಿಂದ ಮಕ್ಕಳಿಗೆ ಸಂಜೆಯ ವೇಳೆ ಹಾಲು ಅಥವಾ ಹಣ್ಣನ್ನು ನೀಡಲು ಸಲಹೆ ಮಾಡಿದೆ.

ಆಹಾರ ತಯಾರಿಕೆ ಮತ್ತು ಬಡಿಸುವಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳುವುದು ಮತ್ತು ಆಹಾರವು ಕೆಡದಂತೆ ಮುಂಜಾಗ್ರತೆ ವಹಿಸಬೇಕು. ಜೊತೆಗೆ ಸೌಹಾರ್ದಯುತ ಪರಿಸರದಲ್ಲಿ ಆಹಾರ ಬಡಿಸುವುದನ್ನು ಉಸ್ತುವಾರಿ ಅಧ್ಯಾಪಕರು ಮತ್ತು ಅಧಿಕಾರಿಗಳು ಖಾತ್ರಿಪಡಿಸಿಕೊಳ್ಳಬೇಕು.

ಎಲ್ಲಾ ಹಣಕಾಸಿನ ಖರ್ಚುವೆಚ್ಚಗಳ ದಾಖಲೆಗಳನ್ನು ಸ್ವಯಂ ಸೇವಕ ನಿರ್ವಹಿಸಬೇಕು, ಹಾಗೂ ಈ ಕಾರ್ಯವನ್ನು ಶಾಲೆಯ ಮುಖ್ಯೋಪಾಧ್ಯಾಯರು ಉಸ್ತುವಾರಿ ಮಾಡಬೇಕು.

## ಸ್ವಯಂ ಸೇವಕರ ನೇಮಕ, ತರಬೇತಿ

- ಯಾವುದೇ ಕಾರ್ಯತಂತ್ರದ ಅಡಿಯಲ್ಲಿ ನೇಮಕಗೊಳ್ಳುವ ಸ್ವಯಂ ಸೇವಕ / ಸಹಾಯಕರನ್ನು ಇಲಾಖೆ ಅಥವಾ ಎಸ್.ಡಿ.ಎಂ.ಸಿ. ನೇರವಾಗಿ ನೇಮಿಸುವಂತಿಲ್ಲ. ಇವರನ್ನು ಸರ್ಕಾರೇತರ ಸಂಘಟನೆಗಳ ಮೂಲಕವೇ ಪಡೆಯಬೇಕು. (ರಾಜೀವ್ ಗಾಂದಿ ಯುವಕ ಸಂಘ, ಸ್ತ್ರೀ ಶಕ್ತಿ ಸಂಘಗಳು, ಇತರ ಸರ್ಕಾರೇತರ ಸಂಘಟನೆಗಳು)
- ಗುಡಾರ ಶಾಲೆಯಲ್ಲಿ ವಿವರಣೆಯನ್ನು ನೋಡಿ
- ಆಹಾರ ತಯಾರಿಕೆ, ನೈರ್ಮಲ್ಯ ಕಾಪಾಡುವುದು, ಮಕ್ಕಳೊಂದಿಗೆ ಸೌಹಾರ್ದವಾಗಿ ನಡೆದುಕೊಳ್ಳುವುದು, ರಾತ್ರಿಯ ವೇಳೆ ಮತ್ತು ಬೆಳಗಿನ ವೇಳೆ ಮಕ್ಕಳ ವ್ಯಾಸಂಗಕ್ಕೆ ವಾತಾವರಣ ನಿರ್ಮಾಣ ಮಾಡುವುದು, ಬೆಳಗಿನ ನಿತ್ಯ ಕರ್ಮಗಳನ್ನು ವ್ಯವಸ್ಥಿತವಾಗಿ ಮಾಡುವುದು ಕುರಿತಂತೆ ಒಂದು ದಿನದ ಅಭಿಶಿಕ್ಷಣವನ್ನು ಸಂಬಂಧಿಸಿದ ಶಾಲೆಯ ಮುಖ್ಯಸ್ಥರು / ಸ್ವಯಂ ಸೇವಕರು / ಸಹಾಯಕರಿಗೆ ಏರ್ಪಡಿಸುವುದು. CRP/BRC ಯವರು ಕೇಂದ್ರ ನಡೆಯುವ ಸ್ಥಳದಲ್ಲಿಯೇ ಈ ತರಬೇತಿಯನ್ನು ಹಮ್ಮಿಕೊಳ್ಳಬಹುದು.

## ಇಲಾಖೆಯಿಂದ ದೊರೆಯುವ ಸೌಲಭ್ಯಗಳು

- ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಉಪಹಾರ.

## ಪಠ್ಯ ಕ್ರಮ / ವಸ್ತು ಪುಸ್ತಕ :

- 06 ತಿಂಗಳ ವಸತಿಯುತ ಬ್ರಿಡ್ಜ್ ಕೋರ್ಸ್ ಕೇಂದ್ರ, ಮಕ್ಕಳಿಗೆ ವಸತಿಯನ್ನು ಕಲ್ಪಿಸುತ್ತದೆ. ಇಲ್ಲಿ ಯಾವ ವಿಧವಾದ ತರಗತಿ ಸಂವಹನ ನಡೆಯುವುದಿಲ್ಲ. ಮಕ್ಕಳು ತಮ್ಮ ವ್ಯಾಸಂಗಕ್ಕೆ ವಸತಿ ಕಲ್ಪಿಸಿರುವ ಅಥವಾ ಹತ್ತಿರದ ಶಾಲೆಗೆ ಹೋಗುತ್ತಾರೆ. ಪ್ರಯುಕ್ತ ಈ ಕೇಂದ್ರಗಳಲ್ಲಿ ಬೋಧನೆ ನಡೆಯುವುದಿಲ್ಲ. ಆದರೆ ಮಕ್ಕಳು ವ್ಯಾಸಂಗ ಮಾಡಲು ಅನುಕೂಲಕರ ವಾತಾವರಣವನ್ನು ಶಾಲೆಯ ಮುಖ್ಯಸ್ಥರು ಮತ್ತು ಸ್ವಯಂ ಸೇವಕರು ಮಾಡುವುದು ಹಾಗೂ ಸ್ವಯಂ ಸೇವಕರು ಮಕ್ಕಳ ಕಲಿಕೆಯಲ್ಲಿ ಸಹಾಯ ನೀಡುವುದು.

## ಕಲಿಕಾ – ಬೋಧನಾ ಸಾಮಗ್ರಿ :

ಮೇಲಿನಂತೆ ಇದೂ ಈ ಕಾರ್ಯತಂತ್ರಕ್ಕೆ ಅನ್ವಯವಾಗುವುದಿಲ್ಲ. ಶಾಲೆಯಲ್ಲಿ ಬೋಧನೆ ನಡೆಯುವುದರಿಂದ ಶಾಲೆಯ ಕಲಿಕಾ – ಬೋಧನೋಪಕರಣ ಬಳಸುತ್ತಾರೆ.

## ದಾಖಲೆಗಳ ನಿರ್ವಹಣೆ :

- ಸ್ವಯಂ ಸೇವಕರ / ಸಹಾಯಕರ / ಮಕ್ಕಳ ಹಾಜರಾತಿ ವಹಿ

  ವೈದ್ಯಕೀಯ ತಪಾಸಣೆ ವಹಿ

  ಸಂದರ್ಶಕರ ವಹಿ

  ಆಹಾರ ಸಾಮಗ್ರಿಗಳ ದಾಸ್ತಾನು ವಹಿ

  ರಸೀತಿಗಳ ಫೈಲು

  ತಯಾರಿಸಿದ ಆಹಾರದ ವಿವರ ಮತ್ತು ಆಹಾರ ಪಡೆದ ಮಕ್ಕಳ ಸಂಖ್ಯೆಯನ್ನು ಒಂದು ವಹಿಯಲ್ಲಿ ಬರೆದಿಡುವುದು.

## ಉಸ್ತುವಾರಿ ಮತ್ತು ವರದಿ ಸಲ್ಲಿಕೆ :

- ಮಹಿಳಾ ಸ್ವಯಂಸೇವಕಿ ಅಥವಾ ಮಹಿಳಾ ಸೇವಕರು ಹೆಣ್ಣು ಮಕ್ಕಳೊಂದಿಗೆ ರಾತ್ರಿ ಸಮಯದಲ್ಲಿ ಮಲಗಲು ವ್ಯವಸ್ಥೆಗೊಳಿಸಬೇಕು. ಅದೇ ರೀತಿ ಗಂಡು ಮಕ್ಕಳ ಜೊತೆಯಲ್ಲಿ ಸ್ವಯಂಸೇವಕ / ಸೇವಕರು ಮಲಗುವುದು.

  ನಿರಂತರ ಮತ್ತು ಸಮಗ್ರ ಉಸ್ತುವಾರಿಯನ್ನು ವಿಶೇಷವಾಗಿ ಎಲ್ಲಾ ವಸತಿ ಸಹಿತ ಒಓಎಸ್ಸಿ ಕಾರ್ಯತಂತ್ರಗಳು ಬಯಸುತ್ತವೆ. ಮಕ್ಕಳ ಸುರಕ್ಷೆ ಉಸ್ತುವಾರಿ ಅಧಿಕಾರಿಗಳ ಪ್ರಥಮ ಆದ್ಯತೆ.

ಪ್ರತಿದಿನ ಬಿ.ಇ.ಓ. ಮತ್ತು ಬಿ.ಆರ್.ಸಿ. ಯವರು ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ವಸತಿ ಕಾರ್ಯತಂತ್ರಗಳ ಶಾಲಾ ಮುಖ್ಯಸ್ಥರೊಡನೆ ಸಂಪರ್ಕ ಸಾಧಿಸಿ ಕೇಂದ್ರ ನಡೆಯುತ್ತಿರುವ ಕುರಿತು ಮಾಹಿತಿ ಪಡೆಯಬೇಕು (ದೂರವಾಣಿ / ಸಿಆರ್‌ಪಿ / ಇಸಿಓ / ಬಿಆರ್‌ಪಿ) ಭೇಟಿಗಳ ವರದಿ ಇತ್ಯಾದಿ ಮಾಧ್ಯಮಗಳಿಂದ )ತತ್‌ಕ್ಷಣ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು.

**ವಿವರಣೆ** : ಕಾನೂನು ಪರಿಧಿಯಲ್ಲಿ ಸಮಸ್ಯೆಗಳಿಗೆ ಉತ್ತರ ಕಂಡು ಕೊಳ್ಳುವ ಕ್ರಮ ಬಯುರೋಕ್ರಸಿಯ ಪ್ರಧಾನ ವೈಲಕ್ಷಣ. ಪ್ರಾಯಶಃ ಇದನ್ನು ಮೀರಿ ಪರಿಹಾರ ಕಂಡುಕೊಳ್ಳುವ ಅಗತ್ಯ ಬರಬಹುದು. ಗಾಂಧೀಜಿಯ (Talisman) ನೆನಪು ಇಂತಹ ಸಂದರ್ಭಗಳಲ್ಲಿ ಪ್ರಯೋಜನಕಾರಿಯಾಗಬಹುದು.

## ಉಸ್ತುವಾರಿ ಅಧಿಕಾರಿಗಳು ಈ ಕೇಂದ್ರಗಳಿಗೆ ಭೇಟಿ ನೀಡಿದಾಗ ಗಮನಿಸಬೇಕಾದ ಅಂಶಗಳು

- ಮಕ್ಕಳ ಸುರಕ್ಷೆ / ನೈರ್ಮಲ್ಯ
- ವಸತಿಯ ನೈರ್ಮಲ್ಯ, ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯದ ವ್ಯವಸ್ಥೆ
- ಆಹಾರ ತಯಾರಿಕೆ, ಅನುಸರಿಸಲಾಗುತ್ತಿರುವ ಕ್ರಮ, ಸಾಧಕ / ಬಾಧಕ
- ಮಕ್ಕಳ ಮಲಗುವ ವ್ಯವಸ್ಥೆಗೆ ಕೈಗೊಂಡಿರುವ ಕ್ರಮ / ಅದರ ಸಮರ್ಪಕತೆ
- ವ್ಯಾಸಂಗಕ್ಕೆ ಮಾಡಿಕೊಟ್ಟಿರವ ಅನುಕೂಲಗಳು, ಮಕ್ಕಳ ಕಲಿಕೆಯ ಪ್ರಗತಿ
- ಆಹಾರ ದಾಸ್ತಾನಿನ ದಾಖಲೆಗಳು, ಭೌತಿಕ ಪರಿಶೀಲನೆ
- ಗೌರವ ಧನದ ವಿತರಣೆ

- ಮಕ್ಕಳೊಂದಿಗೆ ಮಾತನಾಡಿ ಅವರ ಸಮಸ್ಯೆ ತಿಳಿದು ಪರಿಹಾರಕ್ಕೆ ಕ್ರಮ
- ಭೇಟಿಗಳ ಸಂಖ್ಯೆ

| ವಿವರ | CRP / ECO | BRP | BRC / BEO | DIET / Nodal Officer | DDPI / Principal |
|---|---|---|---|---|---|
| ವಾರಕ್ಕೊಮ್ಮೆ | ✓ | – | – | – | – – |
| 15 ದಿನಕ್ಕೊಮ್ಮೆ | – | ✓ | – | – | – |
| ತಿಂಗಳಿಗೊಮ್ಮೆ | – | – | ✓ | ✓ | ✓ |

**ಎನ್.ಜಿ.ಓ.ಗಳ ಭಾಗವಹಿಸುವಿಕೆ :**

- 06 ತಿಂಗಳ ವಸತಿಯುತ ಬ್ರಿಡ್ಜ್ ಕೋರ್ಸ್ ನಡೆಸಲಿರುವ ಸ್ಥಳ ಗುರುತಿಸಿ ಸಮೂಹ ಮಾಧ್ಯಮಗಳಲ್ಲಿ ಪ್ರಕಟಣೆಯನ್ನು ಜಿಲ್ಲೆಯ ಡಿ.ಡಿ.ಪಿ.ಐ ರವರು ಏಪ್ರಿಲ್ 15 ಒಳಗೆ ನೀಡುತ್ತಾರೆ.
- ಜಿಲ್ಲಾ ಮಟ್ಟದ ಸ್ಕ್ರೀನಿಂಗ್ ಕಮಿಟಿಯಲ್ಲಿ ಈ ವಿಷಯ ಪ್ರಸ್ತಾಪಿಸಿ ಅನುಮತಿಸುವುದು. ರೂ. 10 ಲಕ್ಷದ ಮಿತಿಗಿಂತ ಪ್ರಸ್ತಾವನೆ ಹೆಚ್ಚಾಗಿದ್ದರೆ ರಾಜ್ಯಮಟ್ಟಕ್ಕೆ ಕಳುಹಿಸುವುದು.
- ಜಿ.ಐ.ಎ.ಸಿ. ನಿರ್ಧಾರವನ್ನು ರಾಜ್ಯ ಮಟ್ಟದಿಂದ ಜಿಲ್ಲೆಗಳಿಗೆ ತಿಳಿಸಿದ ಕೂಡಲೇ ಕಾರ್ಯಾನುಸರಣೆ ಮಾಡುವುದು
- ವಿವರಕ್ಕೆ ಗುಡಾರ ಶಾಲೆಗಳ ಪ್ರಸ್ತುತ ಭಾಗದ ವಿವರಣೆ ಅಥವಾ ಎನ್.ಜಿ.ಓ ಭಾಗವಹಿಸುವಿಕೆ ನೋಡಿ

* * * * *